

ರಾಷ್ಟ್ರಪತಿಯಾಗಿದ್ದ ಕೆ.ಆರ್. ನಾರಾಯಣನ್ ಅವರೊಂದಿಗೆ







ರಾಮಚಂದ್ರ ರಾವ್ ಉಡುಪಿಯ ಅದಮಾರು ಗ್ರಾಮದಲ್ಲಿ, ಕೃಷ್ಣವೇಣಿ ಅಮ್ಮ ಮತ್ತು ಲಕ್ಷ್ಮಿನಾರಾಯಣ ಆಚಾರ್ಯ ಅವರ ಮಗನಾಗಿ ಹುಟ್ಟಿದರು. ತಂದೆ ಉಡುಪಿ ಮಠದಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದರು. ಸ್ವಲ್ಪವೇ ಆಲಸ್ಯಕ್ಕೆ ಬಲಿಯಾಗಿದ್ದರೂ ಬಾಲಕ ರಾಮಚಂದ್ರನೂ ಇನ್ನೊಬ್ಬ ಬಾಣಸಿಗನಾಗಬೇಕಾಗಿತ್ತು. ಆದರೆ ಈ ಹುಡುಗನಿಗೆ ಅದು ಇಷ್ಟವಿರಲಿಲ್ಲ. ಬಡತನದಲ್ಲೇ ಶಾಲೆಗೆ ಹೋದ. ಶಾಲೆಯಲ್ಲಿ ದಾಖಲಾಗುವಾಗ ಈ ರಾಮಚಂದ್ರನನ್ನು ಗುರುತಿಸಲು ಅವರ ಮುಖ್ಯೋಪಾಧ್ಯಾಯರು ಹೆಸರಿನೊಂದಿಗೆ ಉಡುಪಿ ಎಂದು ಸೇರಿಸಿದ್ದರು. ಪ್ರಾಥಮಿಕ ಶಾಲೆಯನ್ನು ಅದಮಾರಿನಲ್ಲಿ ಆರಂಭಿಸಿದ ಉಡುಪಿ ರಾಮಚಂದ್ರ ವಿದ್ಯೆಯನ್ನು ಅರಸಿಕೊಂಡು ಜಂಗಮನಂತೆ ಅದೆಷ್ಟು ಊರುಗಳನ್ನು ಸುತ್ತಿ ತನ್ನ ಭವಿಷ್ಯವನ್ನು ತಾನೇ ಕಟ್ಟಿಕೊಂಡರು ಎನ್ನುವುದರ ಕಥೆ ಬಹುಶಃ ನಮ್ಮ ಎಲ್ಲ ಯುವಜನರಿಗೆ ಒಂದು ಸ್ಫೂರ್ತಿಯ ಸೆಲೆಯಾಗಬೇಕು.

ಬಳ್ಳಾರಿಯಲ್ಲಿ ವಾರಾನ್ನ ಮಾಡಿಕೊಂಡು ವಾಡ್ಲಾ ಶಾಲೆಯಲ್ಲಿ 3 ಮತ್ತು 4 ನೇ ತರಗತಿ ಮುಗಿಸಿ ಉಡುಪಿಗೆ ವಾಪಸು. ಇಂಟರ್‌ಮೀಡಿಯಟ್ ಹೊತ್ತಿಗೆ ಮತ್ತೆ ಬಳ್ಳಾರಿಯ ವೀರಶೈವ ಕಾಲೇಜಿನ ಆಶ್ರಯ. ಅನಂತರಪುರದ ಸರಕಾರೀ ಕಾಲೇಜಿನಲ್ಲಿ